# ಕಾರ್ಯ ನಿರ್ವಹಣೆಗೆ ರೂಪಿಸಿರುವ ಸೂತ್ರಗಳು
# [ಸೆಕ್ಷನ್ 4(1)(ಬಿ)(4)]

ಈಶಾನ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು 'ಕೇಂದ್ರದ ಆರ್.ಟಿ.ಸಿ. ಕಾಯಿದೆ 1950'ರ ಅಡಿಯಲ್ಲಿ ಸಾರ್ವಜನಿಕರಿಗೆ ಉತ್ತಮ, ಸಮರ್ಪಕ ಹಾಗೂ ಸೂಕ್ತ ಪ್ರಯಾಣದರಗಳನ್ನು ವಿಧಿಸಿ, ಸಾರಿಗೆ ಸೌಲಭ್ಯವನ್ನು ಒದಗಿಸುವ ಉದ್ದೇಶದಿಂದ ರಾಜ್ಯ ಸರ್ಕಾರವು ಕ.ರಾ.ರ.ಸಾ.ನಿಗಮದಿಂದ 2000ರಲ್ಲಿ ಈ.ಕ.ರ.ಸಾ.ಸಂಸ್ಥೆಯನ್ನು ಸ್ಥಾಪಿಸಲ್ಪಟ್ಟಿದೆ. ರಾಜ್ಯ ಸರ್ಕಾರವು ಸದರಿ ಕಾಯಿದೆಯ ಅನುಸಾರ ಸಂಸ್ಥೆಯ ವ್ಯವಸ್ಥಿತ ಕಾರ್ಯಾಚರಣೆ ಹಾಗೂ ಸಮರ್ಪಕ ಆಡಳಿತ ವ್ಯವಸ್ಥೆಯ ನಿರ್ವಹಣೆಗಾಗಿ 'ಕರಾರಸಾ ನಿಗಮದ ನಿಯಮಗಳು 1961'ನ್ನು ರೂಪಿಸಿದ್ದು, ಇದರಲ್ಲಿನ ನಿಯಮಗಳ ಅನುಸಾರ ಆಡಳಿತ ನಿರ್ವಹಣೆ ನಡೆಸಲಾಗುತ್ತಿದೆ. ನಿಗಮದ ಲೆಕ್ಕಪತ್ರಗಳನ್ನು ವಾರ್ಷಿಕವಾಗಿ ತಯಾರಿಸುತ್ತಿದ್ದು, ಈ ಲೆಕ್ಕಪತ್ರಗಳಿಗೆ ಮಂಡಳಿಯ ಅನುಮೋದನೆಯ ನಂತರ ಮಹಾಲೇಖಪಾಲರು, ಕರ್ನಾಟಕ, ಇವರಿಂದ ಆಡಿಟ್ ದೃಢೀಕರಣ ಪತ್ರ ಪಡೆಯಲಾಗುವುದು. ನಿಗಮದ ಕಾರ್ಯಾಚರಣೆಯ ಗುಣಮಟ್ಟ ಹಾಗೂ ವೆಚ್ಚವನ್ನು ನಿಯಂತ್ರಿಸುವ ಸಲುವಾಗಿ ಆಂತರಿಕವಾಗಿ ವಿವಿಧ ಗುರಿಗಳನ್ನು ನಿಗಧಿಪಡಿಸಿಕೊಂಡು ವಾರ್ಷಿಕ ಕ್ರಿಯಾ ಯೋಜನೆಯನ್ನು ಹೊಂದುವ ವ್ಯವಸ್ಥೆ ಇರುತ್ತದೆ. ನಿಗಮದ ಕಾರ್ಯದಕ್ಷತೆಯನ್ನು ವೃದ್ಧಿಸಲು ವೃತ್ತಿಪರ ಕಾರ್ಯನಿರ್ವಹಣಾ ಸೂತ್ರ/ ತಂತ್ರಗಳನ್ನು ಅನುಸರಿಸಿ, ಗುರಿ ಸಾಧನೆ ಕುರಿತು (ಕ್ರಿಯಾ ಯೋಜನೆಯ ಅನುಸಾರ) ದೈನಂದಿನ, ಸಾಪ್ತಾಹಿಕ, ಮಾಸಿಕವಾರು ವಿವರ ವರದಿಗಳನ್ನು ವಿವಿಧ ಹಂತಗಳಲ್ಲಿ ವಿಮರ್ಶಿಸುವ ಪರಿಶೀಲನಾ ಪ್ರಕ್ರಿಯೆಯನ್ನು ಸಹ ಅಳವಡಿಸಿಕೊಳ್ಳಲಾಗಿದೆ.

ನಿಗಮವು ಒದಗಿಸಿರುವ ವಿವಿಧ ಬಸ್ ಸೇವೆಗಳು, ಸೌಲಭ್ಯಗಳು ಹಾಗೂ ಇತರೆ ಎಲ್ಲಾ ಅಗತ್ಯ ಮಾಹಿತಿಗಳನ್ನು ಸಾರ್ವಜನಿಕರಿಗೆ ಒದಗಿಸುವ ನಿಟ್ಟಿನಲ್ಲಿ ಎಲ್ಲಾ ಬಸ್ ನಿಲ್ದಾಣಗಳಲ್ಲಿ ಸೂಚನಾ/ಪ್ರದರ್ಶನ ಫಲಕಗಳಲ್ಲಿ ಪ್ರಚುರಪಡಿಸಲಾಗಿದೆ. ಮತ್ತು ಕಾಲಕಾಲಕ್ಕೆ ನಿಯತಕಾಲಿಕೆಗಳು ಮತ್ತು ದಿನ ಪತ್ರಿಕೆಗಳ ಮೂಲಕ ಈ ಕುರಿತು ಸಾರ್ವಜನಿಕರ ಅನುಕೂಲಕ್ಕಾಗಿ ಪ್ರಕಟಿಸಲಾಗುತ್ತಿದೆ.